# ಶ್ರೀರಾಮಕೃಷ್ಣರ ದೃಷ್ಟಾಂತ ಚಿತ್ರ

ಸಕ್ಕರೆಯ ಗೊಂಬೆ, ಬಟ್ಟೆಯ ಗೊಂಬೆ ಮತ್ತು ಕಲ್ಲಿನ ಬೊಂಬೆ ಈ ಮೂರನ್ನೂ ಒಬ್ಬನು ನೀರಿನಲ್ಲಿ ಮುಳುಗಿಸುತ್ತಾನೆ.




ಸಕ್ಕರೆಯ ಬೊಂಬೆ ನೀರಿನಲ್ಲಿ ಕರಗಿ ಹೋಗುತ್ತದೆ. ಉಳಿದೆರಡು ಗೊಂಬೆಗಳನ್ನು ಮೇಲಕ್ಕೆ ತೆಗೆಯುತ್ತಾನೆ.



ಜ್ಞಾನಿಯ ವ್ಯಕ್ತಿತ್ವ ಭಗವಂತನಲ್ಲಿ ಕರಗಿ ಹೋಗುತ್ತದೆ.

ಬಟ್ಟೆಯ ಬೊಂಬೆ ನೀರನ್ನು ಹೀರಿಕೊಂಡು ಸಂಪೂರ್ಣ ಒದ್ದೆಯಾಗಿರುತ್ತದೆ. ಹಾಗೆಯೆ ಭಕ್ತ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಳ್ಳುತ್ತಾನೆ. ಆದರೆ ಅದು ಸಂಪೂರ್ಣ ಭಗವನ್ಮಯವಾಗಿರುತ್ತದೆ.



ಕಲ್ಲಿನ ಬೊಂಬೆ ಹಾಗೆಯೇ ಇರುತ್ತದೆ. ಅಂತೆಯೆ ಪ್ರಾಪಂಚಿಕ ವ್ಯಕ್ತಿ ದಿವ್ಯಜ್ಞಾನ ತನ್ನನ್ನು ಪ್ರವೇಶಿಸುವುದಕ್ಕೆ ಬಿಡುವುದಿಲ್ಲ.



*ಚಿತ್ರ : ಸೋಮಶೇಖರ*